ಸೇರ್ಕೊಂಡು ಒಂದು ರೀತಿಯ ಸಮಾಧಾನದಿಂದ ಇದ್ದೆ. ಇದು ಹೊಸ ಜಾಗ. ತಿಳಿದವರು ಯಾರು ಇರಲಿಲ್ಲವಾದ್ದರಿಂದ ನಾನು ಜನರ ದೃಷ್ಟಿಯಲ್ಲಿ ಸರಿಯಾದವಳಾಗಿದ್ದೆ" ಎಂದು ಮಾತು ನಿಲ್ಲಿಸಿ, ನಾನು ಏನಾದರೂ ಹೇಳಬಹುದೆಂದು ಮುಖ ನೋಡಿದಳು. ಬೇರೆ ಏನನ್ನಾದರೂ ಕೇಳುವ ಯಾವ ನೈತಿಕತೆಯೂ ನನಗಿರಲಿಲ್ಲ. ನಾನು ಕೇಳಿದ್ದ ಸಿಲ್ಲಿ ಪ್ರಶ್ನೆಗೆ ನಾಚಿಕೆಯಿಂದ ತಲೆತಗ್ಗಿಸುವುದನ್ನು ಬಿಟ್ಟು ಬೇರೇನೂ ಮಾಡುವಂತಿರಲಿಲ್ಲ.

"ಕಳಂಕ ಒಂಥಾರ ನಮ್ಮ ನೆರಳಿದ್ದಂತೆ ಕಣ್ರೀ. ಅದು ಯಾವತ್ತೂ ನಮ್ಮ ಬೆನ್ನು ಬಿಡಲ್ಲ. ನಾನು ಹೇಗೆ ಕಳಂಕಕ್ಕೆ ಹೆದರಿ ಪೀಣ್ಯ ಬಿಟ್ಟು ಬೊಮ್ಮನಹಳ್ಳಿಗೆ ಬಂದೆನೊ ಅದೇ ಹೊತ್ತಿಗೆ ಬೇರೆ ಕಾರಣಗಳಿಂದ ಏರಿಯಾ ಬದಲಾಯಿಸಿ ಬಂದಿದ್ದ ಒಬ್ಬಳು ನಾನು ಕೆಲ್ಸ ಮಾಡುವ ಕಂಪೆನಿಗೆ ಬಂದಳು. ಅವಳು ನಾನು ಮೊದಲು ಕೆಲಸ ಮಾಡುತ್ತಿದ್ದ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದವಳು. ಮುಖ ಪರಿಚಯದವಳು. ಬಂದವಳೆ ನನ್ನ ಚರಿತ್ರೆಯನ್ನು ಒದರತೊಡಗಿದಳು. 'ಹೇ ಅವ್ಳು ನೋಡಕ್ಕೆ ಚೆನ್ನಾಗವ್ಳೆ ಅಷ್ಟೆಯಾ. ಆದ್ರೆ ಕ್ಯಾರೆಕ್ಟರು ಒಂಚೂರು ಚೆನ್ನಾಗಿಲ್ಲ. ನಾನು ಮದ್ಲು ಕೆಲ್ಸ ಮಾಡ್ತಿದ್ನಲ್ಲ ಅಲ್ಲಿ ಇವ್ಳಣ್ಣ ಕೆಲ್ಸ ಮಾಡ್ತಾನೆ. ಅಣ್ಣಾಂದ್ರೆ ಸ್ವಂತ ಅಲ್ಲ, ದೊಡ್ಡಪ್ಪನ ಮಗ. ಅವ್ನ ಮನೆಲೆ ಇದ್ದಿದ್ದು ಇವ್ಳು. ಗಂಡನ ಮೇಲೇ ಏನೋ ಕಿತಾಪತಿ ಮಾಡುದ್ಳಂತೆ, ಅದ್ಕೆ ಗಂಡ ಬುಟ್ಟೋಡುಸ್ದ. ಅಯ್ಯೋ ಪಾಪಾಂತ ಅಣ್ಣ ಕರ್ಕೊಂಡ್ಬಂದು ಮನೇಲಿಟ್ಕೊಂಡು ಕೆಲ್ಸನೂ ಕೊಡ್ಸಿದ್ದ. ಅಷ್ಟಿಲ್ದಾಗ ಯಾರ್ದ್ದರ ಮನೆಗೆ ಕರ್ಯೋಳಂತೆ. ಅದ್ಕೆ ಅವ್ನು ಮನೆಬುಟ್ಟು ವದ್ದು ಓಡುಸ್ದಾ' ಹೀಗೆ ಶುರುವಾದ ಚಾರಿತ್ರ್ಯವಧೆಗೆ ಹೆದರಿ ಬೇರೊಂದು ಕಡೆಗೆ ಹೋದೆ. ಇದನ್ನೆಲ್ಲ ಕೇಳಿಸಿಕೊಂಡಿದ್ದ ಮತ್ತೊಬ್ಬಳು ಅಲ್ಲಿಗೂ ಬಂದಳು. ಹೇಳಿ, ಹೆದ್ರಿ ಎಲ್ಲಿಗೆ ಹೋಗ್ಲಿ? ತಾನು ತಿಂದು ಮೇಕೆಯ ಮೂತಿಗೆ ಕೈಒರೆಸಿದ್ದ ಅಣ್ಣ ನನ್ನನ್ನು ಸರ್ವನಾಶ ಮಾಡಿದ್ದ. ನಾನು ಸತ್ತರೂ ನನ್ನ ಹಿಂದೆ ಬರುತ್ತಿದ್ದ ಈ ಕಳಂಕಕ್ಕೆ ಹೆದರಿ ಸಾಯುವುದಕ್ಕಿಂತ, 'ನಾನು ಕಳಂಕಿಣಿ. ನಾನು ಸರಿಯಿಲ್ಲ' ಅಂತ ಒಪ್ಕೊಂಡ್ಬಿಟ್ಟಿದ್ದೀನಿ ಕಣ್ರಿ."

"ಸೆಕ್ಸ್ ನನ್ನನ್ನು ಯಾವತ್ತು ಕಾಡ್ಲಿಲ್ಲ. ಅದ್ರ ಬಗ್ಗೆ ತಿಳ್ಕೊಳಕ್ಕೆ ಮುಂಚೆ, ನೆನೆದು ರೊಮಾಂಚನಗೊಳ್ಳುವ ಮುಂಚೆಯೇ ಎಲ್ಲ ಮುಗಿಸಿ ಬಿಟ್ರು. ನಾನು ಯಾವತ್ತು **'I con't control my self, come and... me'** ಎಂದು ಬೆತ್ತಲೆಯಾಗಿ ನಿಂತ್ಕೊಂಡಿರ್ಲಿಲ್ಲ. ಧಿಕ್ಕರಿಸಲು ಧೈರ್ಯಬರುವ ಮುಂಚೆಯೇ ನಾನು ಎಲ್ಲಾನೂ ಕಳ್ಕೊಂಡುಬಿಟ್ಟೆ. ಹೇಳಿ, ನನ್ನ ಜಾಗದಲ್ಲಿ ನೀವಿದ್ದಿದ್ರೆ ಏನ್ಮಾಡ್ತಾ ಇದ್ರಿ?" ಎಂದು ಕೇಳಿದವಳ ಮುಖ ನೋಡುವ ಧೈರ್ಯ ನನಗಿರಲಿಲ್ಲ. ಅಪರಾಧಿ ಭಾವದಿಂದ ಕಣ್ಣು ಕೆಳಗೆ ನೋಡಲು ಶುರು ಮಾಡಿದವು. 'ಆ ಕ್ಷಣ ಜೀವನದಲ್ಲಿ ಇಷ್ಟೆಲ್ಲ ನಡೆದರೂ ಇನ್ನೂ ಮಾನಸಿಕವಾಗಿ ಬದುಕಿರುವಳೆ?' ಎನಿಸದಿರಲಿಲ್ಲ. "ಈ ಪ್ರಪಂಚ ಪಾಪವನೆಲ್ಲ ದುರ್ಬಲರಿಗೆ ಕಟ್ಟುತ್ತೆ. ಸೆಕ್ಸ್ ವಿಷಯದಲ್ಲಿ ತನ್ನನ್ನು ತಾನು ಕಾಪಾಡಿಕೊಳ್ಳಲಾಗದ ಹೆಣ್ಣು ದುರ್ಬಲಳು. ಆದ್ದರಿಂದ ಎಲ್ಲ ಪಾಪಕ್ಕೂ ಅವಳೆ ಹೊಣೆ. ಗಂಡು ಹತ್ತು ಹೆಂಗಸರೊಂದಿಗೆ ಸಂಬಂಧ ಇಟ್ಕೊಂಡ್ರೆ ಅದು ಅವ್ನ ಶಕ್ತಿ, ರಸಿಕತೆ. ಅದ್ನ ಹೆಣ್ಣು ಮಾಡುದ್ರೆ ಹಾದರ. ಹಾದರಕ್ಕೆ ನರಕದಲ್ಲಿ ತರಾವರಿ ಶಿಕ್ಷೆ. ಅಲ್ಲಿ ಅವುಳ್ನ ಚಕ್ಲಿ, ಕೋಡ್ಬಳೆ ಕರಿದಂತೆ ಎಣ್ಣೆಯಲ್ಲಿ ಹಾಕಿ ಕರೀತಾರೆ. ಅದೇ ಕೆಲವು ದೇಶಗಳಲ್ಲಿ ಚೇಳು, ಕಪ್ಪೆನ್ನೆಲ್ಲ ಹುರಿದು ಕಡ್ಡಿಯಲಿ ಸಿಕ್ಕಿಸಿ ಮಾರಾಟಕ್ಕಿಡುವಂತೆ ಅವುಳ್ನ ಹುರ್ದು ಕಡ್ಡಿಯಲ್ಲಿ ಸಿಕ್ಕಿಸಿ ಇಡ್ತರಂತೆ. ಅಲ್ಲಿರೋರು ಅವುಳ್ನ ಚೂರುಚೂರು ಕಿತ್ಕೊಂಡು ತಿಂತಾರಂತೆ. ಅವಳನ್ನು ಒಂದೊಂದ್ಸೂರು ಇಲ್ಲೆ ಕಿತ್ಕೊಂಡು ತಿಂದಿರ್ತಾನಲ್ಲ ಅಂತಹವನಿಗೆ ಸ್ವರ್ಗ. ಅಲ್ಲಿ ದೇವಲೋಕದ ಅಪ್ಸರೆಯರಿಂದ ಆಯಿಲ್ ಮಾಸಾಜ್, ರಂಭೆ, ಊರ್ವಸಿಯರ ನರ್ತನ, ಕುಡಿಯಲು ಅಮೃತ! ಎಷ್ಟೊಂದು ವಿಚಿತ್ರ ಅಲ್ವಾ?" ಎಂದು ವ್ಯಂಗ್ಯನಗೆ ನಕ್ಕಳು.